

ಮಹಾರಾಷ್ಟ್ರ– ಗುಜರಾತ್‌ನಲ್ಲಿ ಹರಿಯುವ ತಾಪ್ತಿ ನದಿ ಬಯಲಿನಿಂದ ಆರಂಭವಾಗುವ ಪಶ್ಚಿಮ ಘಟ್ಟದ ಬೆಟ್ಟ ಸಾಲುಗಳು ಕನ್ಯಾಕುಮಾರಿಯವರೆಗೆ ಆವರಿಸಿಕೊಂಡಿವೆ. ದಟ್ಟ ಹಸಿರಿನ ಈ ಬೆಟ್ಟಸಾಲು ಮಹಾತಾಯಿಯೊಬ್ಬಳು ಮಗುವನ್ನು ಎದೆಗವಚಿಕೊಂಡು ಪೋಷಿಸುವಂತೆ ಭಾರತದ ಜೀವಲೋಕವನ್ನು ಜತನ ಮಾಡುತ್ತಿವೆ. ಆಸರಿಗೆ, ಅಶನಕ್ಕೆ, ವಸನಕ್ಕೆ ಎಂಬಂತೆ ಮನುಕುಲಕ್ಕೆ ಎಲ್ಲವನ್ನೂ ಕೊಟ್ಟು ಪೊರೆಯುತ್ತಿರುವ ಈ ಬೆಟ್ಟಸಾಲುಗಳ ಸಂರಕ್ಷಣೆಯ ಆಗ್ರಹ ಹಲವಾರು ದಶಕಗಳಿಂದ ಕೇಳಿ ಬರುತ್ತಿದೆ. ಅದಕ್ಕಾಗಿ ಅಧ್ಯಯನಗಳು, ಸಮೀಕ್ಷೆಗಳು ನಡೆದಿವೆ. ವರದಿಗಳು ಸಿದ್ಧವಾಗೊಂಡಿವೆ. ಇದೆಲ್ಲದರ ಜೊತೆಜೊತೆಗೇ ಘಟ್ಟ ಪ್ರದೇಶವು ಶಿಥಿಲವಾಗುವಂತಹ ಚಟುವಟಿಕೆಗಳೂ ಮುಂದುವರೆದಿವೆ. ಪಶ್ಚಿಮ ಘಟ್ಟಕ್ಕೆ ಗಾಸಿಯಾಗುವಂತಹ ಚಟುವಟಿಕೆಗಳನ್ನು ಮಾಡಿದರೆ ಏನೆಲ್ಲ ಪರಿಣಾಮಗಳಾಗಬಹುದು ಎಂಬ ಊಹೆ, ಅಂದಾಜು ಮತ್ತು ಭವಿಷ್ಯವಾಣಿಯ ಕುರಿತು ವರ್ಷಗಟ್ಟಲೆ ಚರ್ಚೆಗಳು ನಡೆದಿವೆ. ಕಳೆದೈದು ವರ್ಷಗಳಿಂದ ಆ ಭವಿಷ್ಯವಾಣಿಗಳು ನಿಜವಾಗುತ್ತಿರುವುದನ್ನು ಕಣ್ಣಾರೆ ನೋಡತೊಡಗಿದ್ದೇವೆ, ಅನುಭವಿಸತೊಡಗಿದ್ದೇವೆ.

ಭಾರೀ ಪರ್ವತಗಳೇ ಕುಸಿದು, ಊರಿಗೆ ಊರೇ ಮಾಯವಾದಂತಹ ಘಟನೆಗಳಿಗೆ ನಾವು ಸಾಕ್ಷಿಯಾಗಿದ್ದೇವೆ. ನಮ್ಮ ಪೂರ್ವಜರು ಎಂಥಾ ಮಳೆಯನ್ನು ಎದುರಿಸುತ್ತ ಬೆಟ್ಟದ ಇಳುಕಲುಗಳಲ್ಲಿ, ಕೊರಕಲುಗಳಲ್ಲಿ, ಚೆನ್ನದಂತಹ ಬೆಳೆ ತೆಗೆಯುತ್ತ, ಪ್ರಕೃತಿಯೊಂದಿಗೆ ಭವ್ಯವಾದ ಬಾಳುವೆ ಮಾಡಿದ್ದನ್ನು ನೋಡಿದ್ದೇವೆ. ಹಿರಿಯರು ಹೇಳುವ ಕತೆಗಳನ್ನು ಕೇಳಿದ್ದೇವೆ. ಅಷ್ಟೇ ಏಕೆ, ಈಗಿನ ಎಷ್ಟೋ ಜನರ ಬಾಲ್ಯದ ಅನುಭವಗಳಲ್ಲಿ ಸಮೃದ್ಧ ನೆನಪುಗಳ ಬುತ್ತಿಯೇ ಇದೆ. ಆದರೆ ಇಂದು, ಮನುಷ್ಯನಿರ್ಮಿತ ಬೃಹತ್ ಅಭಿವೃದ್ಧಿಯನ್ನು ಕ್ಷುಲ್ಲಕವೆಂಬಂತೆ ಕೊಚ್ಚಿಹಾಕುವ ಒಂದೆರಡು ದಿನಗಳ ಮಳೆಯನ್ನು ಎದುರಿಸುವುದು ನಮ್ಮಿಂದ ಸಾಧ್ಯವಾಗುತ್ತಿಲ್ಲ. ಶತಮಾನಗಳಿಂದ ನಂಬಿಕೊಂಡು ಬಂದ ಬೆಳೆಗಳ ಈಗಿನ ಮರ್ಜಿ ಅರ್ಥವಾಗುತ್ತಿಲ್ಲ. ಮಾವು ಹೂವು ಬಿಡುವ ಕಾಲ ಬದಲಾಗಿದೆ. ಕೋಗಿಲೆ ಯಾವಾಗ ಹಾಡುತ್ತದೆ ಎಂದು ತಿಳಿಯದಾಗಿದೆ. ಅಡಿಕೆ ಕೊಯ್ಲಿನ ಸೀಸನ್ನು ಯಾವುದೆಂದು ನಿರ್ದಿಷ್ಟವಾಗಿ

